ಅನುಬಂಧ–೪

೧೯೮೮–೮೯ನೇ ಸಾಲಿನಲ್ಲಿ (ಜನವರಿ ೧೯೮೯ರ ಅಂತ್ಯದವರೆಗೆ) ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಸಂಸ್ಥೆಗಳಿಗೆ ಗಿರಿಜನರ ಉಪಯೋಜನೆಯಡಿಯಲ್ಲಿ ನೀಡಿದ ವಿಶೇಷ ಕೇಂದ್ರೀಯ ಸಹಾಯಧನ ವೆಚ್ಚದ ವಿವರ.

ಕ್ರಮ ಸಂಖ್ಯೆ	ಇಲಾಖೆಗಳ ಹೆಸರು	ಬಿಡುಗಡೆಯಾದ ಹಣ	ಖರ್ಚಾದ ಹಣ	ಉಳಿಕೆ ಹಣ
೧	ವ್ಯವಸಾಯ ಇಲಾಖೆ	೨೦.೭೧	೪.೬೦	೧೬.೧೧
೨	ತೋಟಗಾರಿಕೆ ಇಲಾಖೆ	೧.೫೧	೧.೪೬	೦.೦೫
೩	ಪಶುಸಂಗೋಪನಾ ಇಲಾಖೆ	೯.೯೫	೪.೭೮	೫.೧೭
೪	ಅರಣ್ಯ ಇಲಾಖೆ (ಜಿಲ್ಲಾ ಪರಿಷತ್ ವ್ಯಾಪ್ತಿ)	೧೫ ೪೫	೮.೨೯	೭.೧೬
೫	ಕೈಗಾರಿಕೆ ಮತ್ತು ವಾಣಿಜ್ಯ	೬.೦೦	೨.೦೮	೩.೯೨
೬	ನೀರಾವರಿ ಬಾವಿಗಳು	೧.೯೮	೧.೨೨	೦.೭೬
೭	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ	೮.೭೬	೮,೫೯	೦.೦೭
೮	ಬೆಂಗಳೂರು (ನಗರ) ಜಿಲ್ಲೆ	೦,೩೬	೦.೩೬	—
೯	ಅರಣ್ಯ ಇಲಾಖೆ	೧೦.೦೦	೧.೨೯	೮.೭೧
೧೦	ಆದಿವಾಸಿ ಜನೋದ್ಧಾರ	೩.೩೯	೩.೩೯	—
೧೧	ಆಡಳಿತ (ಸಮಾಜ ಕಲ್ಯಾಣ ಇಲಾಖೆ)	೧.೦೦	೦.೭೫	೦.೨೫
		೭೯.೧೧	೩೬.೮೧	೧೨.೩೦

ಕರ್ನಾಟಕ ರಾಜ್ಯದ ಎಸ್.ಸಿ./ಎಸ್. ಟಿ. ಕಾರ್ಪೊರೇಷನ್ ಹಣ ವ್ಯವಹಾರದ ಕುರಿತು

೩೦೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿಖಿ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ಎಸ್. ಸಿ./ಎಸ್.ಟಿ ಕಾರ್ಪೊರೇಷನ್‌ಗೆ ಕರ್ನಾಟಕ ಸರಕಾರ ಹಾಗೂ ಕೇಂದ್ರ ಸರಕಾರವು ಎಷ್ಟು ಹಣ ಬಿಡುಗಡೆ ಮಾಡಿದೆ ?

ಆ) ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗಿದೆ ಹಾಗೂ ವೆಚ್ಚವಾದ ಹಣವೆಷ್ಟು ? ಬಿಡುಗಡೆಯಾದ ಪೂರ್ಣ ಹಣ ವೆಚ್ಚವಾಗದೆ ಇರಲು ಕಾರಣವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ೧೯೮೮–೮೯ ನೇ ಸಾಲಿನಲ್ಲಿ ಕೇಂದ್ರಸರ್ಕಾರದವರು ಈ ಕೆಳಕಂಡಂತೆ ನಿಗಮಕ್ಕೆ ಹಣ ಬಿಡುಗಡೆ ಮಾಡಿದ್ದಾರೆ.

೧) ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ಸಂಬಂಧಿಸಿದಂತೆ :

೧. ಶೇರು ಬಂಡವಾಳದ ಬಾಬ್ತು ರೂ. ೩೦.೦೦ ಲಕ್ಷಗಳು (ಭಾರತ ಸರ್ಕಾರದಿಂದ ಬಿಡುಗಡೆಯಾಗಿದ್ದು ಅದನ್ನು ನಿಗಮಕ್ಕೆ ಮರುಬಿಡುಗಡೆ ಮಾಡಲಾಗುತ್ತಿದೆ). ಅದು ಬಿಡುಗಡೆಯಾದನಂತರ ಅದರ ಸಮಾನಾಂತರವಾದ ಶೇರನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡುವುದು.

೨. ವಿಶೇಷ ಕೇಂದ್ರೀಯ ಸಹಾಯ: ಸಹಾಯ ಧನ ಮಂಜೂರಾತಿಗಾಗಿ ರೂ. ೭೬ ಲಕ್ಷಗಳು.

೩. ಸ್ವಯಂ ಉದ್ಯೋಗಕ್ಕಾಗಿ ರೂ. ೧೨.೫೫ ಲಕ್ಷಗಳು.

೪. ನೀರಾವರಿ ಕೊಳವೆ ಬಾವಿ ಕಾರ್ಯಕ್ರಮಕ್ಕೆ ರೂ. ೧೧೬ ಲಕ್ಷಗಳು.

೨) ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ

೧. ಬೀಜ ಧನ ಸಾಲ ಮಂಜೂರಾತಿಗಾಗಿ ರೂ. ೩.೦೦ ಲಕ್ಷಗಳು

೨. ನೀರಾವರಿ ಕೊಳವೆ ಬಾವಿ ಕಾರ್ಯಕ್ರಮಕ್ಕೆ ರೂ. ೮.೭೬ ಲಕ್ಷಗಳು.

ಆ) ೧. ಸಹಾಯ ಧನ ಮಂಜೂರಾತಿಗಾಗಿ ರೂ. ೭೬ ಲಕ್ಷಗಳನ್ನು ನಿಗಮಕ್ಕೆ ಸರ್ಕಾರಿ ಆಜ್ಞೆ ಸಂಖ್ಯೆ ಎಸ್ ಡ ಬ್ಲ್ಯೂ ಎಲ್ ೧೨೯ ಎಸ್ ಎಲ್ ಪಿ ೮೮ ದಿನಾಂಕ ೭-೯-೮೮ ರಲ್ಲಿ ಮಾಡಲಾಗಿದೆ. ಈ ಹಣವು ನಿಗಮದ ಲೆಕ್ಕಕ್ಕೆ ಜಿಲ್ಲಾ ಖಜಾನೆಯಿಂದ ತಾರೀಖು ೨೮-೧೨-೮೮ ರಲ್ಲಿ ಜಮಾ ಆಗಿದೆ. ಬಿಡುಗಡೆಯಾದ ೭೬ ಲಕ್ಷಗಳನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆ.

೨. ರೂ. ೧೨.೫೫ ಲಕ್ಷಗಳನ್ನು ಪೌರ ಕಾರ್ಮಿಕ ಮತ್ತು ಅವರ ಕುಟುಂಬದವರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ರೂ. ೯೧.೫೦೦-೦೦ಗಳನ್ನು ಖರ್ಚು ಮಾಡಲಾಗಿದೆ ಉಳಿದ ಹಣವನ್ನು ಪೌರ ಕಾರ್ಮಿಕರಿಗಾಗಿ ರೇಷ್ಮೆ ನೇಯ್ಗೆಯ ವೃತ್ತಿಯಲ್ಲಿ ತರಬೇತಿಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಸಹಕಾರದೊಡನೆ ತರಬೇತಿ ನೀಡಿ ಅವರು ಸ್ವಂತ ಘಟಕಗಳನ್ನು ಪ್ರಾರಂಭಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ತರಬೇತಿ ಕಾರ್ಯಕ್ರಮ ಒಂದು ವರ್ಷದ ಕಾಲ ಅವಧಿ ಇರುವುದರಿಂದ ಈಗಲೇ ಹಣದ ಖರ್ಚಿನ ವಿವರ ನೀಡಲಾಗುವುದಿಲ್ಲ.

೩. ನೀರಾವರಿ ಕೊಳವೆ ಬಾವಿಯ ಮೊದಲನೆ ಕಂತೆಂದು ೮ ಜಿಲ್ಲೆಗಳಲ್ಲಿ ೪೪೨ ಕೊಳವೆ ಬಾವಿಗಳನ್ನು ಕೊರೆಯಲು ಈ ಸಾಲಿನಲ್ಲಿ ವಿಶೇಷ ಕೇಂದ್ರೀಯ ಸಹಾಯ ಬಂದಿದ್ದು ಈ ಆಜ್ಞೆಯಂತೆ ಹಣವು ದಿನಾಂಕ ೨೦-೧೨-೮೮ರಲ್ಲಿ ನಿಗಮದ ಲೆಕ್ಕಕ್ಕೆ ಜಮಾ ಆಗಿದೆ.

ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯಕ್ರಮವನ್ನು ಕರ್ನಾಟಕ ಕೃಷಿ ಕೈಗಾರಿಕಾ ನಿಗಮಕ್ಕೆ ವಹಿಸಲಾಗಿದೆ. ಅದರಂತೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮವು ಈವರೆಗೆ ೧೧೩ ಕೊಳವೆಬಾವಿಗಳನ್ನು ಕೊರೆದಿದೆ. ಇದರ ಪೈಕಿ ೮೦ ಬಾಬ್ತು ಬಿಲ್ಲನ್ನು ಇವರು ಸಲ್ಲಿಸಿಲ್ಲ. ಆದುದರಿಂದ ಖರ್ಚನ್ನು ತೋರಿಸಲಾಗಿಲ್ಲ ಆದರೆ ದಿನಾಂಕ ೩೧-೩-೮೯ರ ಒಳಗೆ ಎಲ್ಲ ಹಣವನ್ನು ಖರ್ಚು ಮಾಡಲಾಗುವುದು.

೪. ಪರಿಶಿಷ್ಟ ವರ್ಗದವರಿಗೆ ಬೀಜಧನ ಸಾಲ ಮಂಜೂರಾತಿಗಾಗಿ ಕೇಂದ್ರ ಸರ್ಕಾರದಿಂದ ರೂ. ೩.೦೦ ಲಕ್ಷಗಳು ಆಜ್ಞೆ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೨೦೪ ಎಸ್. ಎಲ್. ಪಿ. ೮೮ ದಿನಾಂಕ ೮-೨-೮೯ರಲ್ಲಿ ಬಿಡುಗಡೆಯಾಗಿದೆ. ಮಾರ್ಚ್ ಅಂತ್ಯದೊಳಗೆ ಈ ಹಣವನ್ನು ಖರ್ಚು ಮಾಡಲಾಗುವುದು.

೫. ನೀರಾವರಿ ಕಾರ್ಯಕ್ರಮವನ್ನು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಜಾರಿ ಇಲ್ಲದೆ ಇರುವ ಜಿಲ್ಲೆಗಳಲ್ಲಿ (Non ITDP districts) ಕೊಳವೆ ಬಾವಿ ಕೊರೆಯುವ ಸಲುವಾಗಿ ರೂ. ೮.೭೬ ಲಕ್ಷಗಳು ತಾರೀಖು ೩೦-೮-೮೮ ಮತ್ತು ೭-೯-೮೮ ರಲ್ಲಿ ಸರ್ಕಾರದಿಂದ ಬಿಡುಗಡೆಯಾಗಿದೆ. ಇವರಲ್ಲಿ ೩೩ ಬಾವಿಗಳನ್ನು ಕೊರೆಯಲು ಅವಕಾಶವಿದೆ. ಈಗಾಗಲೇ ೩೩ ಬಾವಿಗಳನ್ನು ಕೊರೆಯಲಾಗಿದೆ. ಮಾರ್ಚ್ ೩೧ನೇ ರೊಳಗೆ ಈ ಹಣವನ್ನು ಪೂರ್ತಿಯಾಗಿ ಖರ್ಚು ಮಾಡಲು ವ್ಯವಸ್ಥೆ ಮಾಡಲಾಗಿದೆ.